ಮೈಸೂರ ಗೆಜೆಟ್.

ನಂ. 29 ಸರ್ಕಾರದಿಂದ ಛಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಜುಲೈ ತಾ॥ 19, ಸನ್ 1884.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರೆಟೆರಿಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್

ಇಸ್ತಿಹಾರ್‌ನಾಮೆಗಳು.

ತಾರೀಖು 5ನೇ ಜುಲೈ 1884.

ನಂ. 67.—ಯಡೆಹಳ್ಳಿ ಡೆಪ್ಯುಟಿ ಅಮಲ್ದಾರ್ ಮಹಮ್ಮದಲ್ಲೀಖಾನರು ಚಿತ್ರದುರ್ಗದ ಸಬ್ ಡಿವಿಜನಿಗೆ ಸೇರಿದ ಹಾನಗಲ್ಲಿಗೂ, ಹಾನಗಲ್ಲಿನ ಡೆಪ್ಯುಟಿ ಅಮಲ್ದಾರ್ ಅಳಿಸಿಂಗ್ರಯ್ಯಂಗಾರು ಕಡೂರು ಡಿಸ್ಟ್ರಿಕ್ಟಿಗೆ ಸೇರಿದ ಯಡೆಹಳ್ಳಿಗೂ ವರ್ಗಮಾಡಲ್ಪಟ್ಟಿರುತ್ತಾರೆ.

ಸರ್ಕಾರೀ ಕಾರಣಗಳ ಮೇಲೆ ಈ ವರ್ಗಾ ವರ್ಗಿಗಳು ಮಾಡಲ್ಪಟ್ಟಿರುತ್ತವೆ.

ತಾರೀಖು 8ನೇ ಜಾಲೈ 1884.

ನಂ. 68—ಸನ್ 1871ನೇ ಇಸವಿ Xನೇ ನಂಬರ್ ಯಕ್ಸೈಜ್ ಆಕ್ಟಿನ 46ನೇ ಸೆಕ್ಷನ್ ಅನುಸರಿಸಿ ಮೈಸೂರು ಸರ್ಕಾರದವರು, ಸ್ಪಿರಿಟ್ ಸಂಬಂಧವಾದ ಮತ್ತು ಉಕ್ಕುವ ಸಾರಾಯಿಗಳು ಮತ್ತು ನಿಷಾ ಉಂಟುಮಾಡುವ ಯಲ್ಲಾ ತರಹೇದ ಪದಾರ್ಥಗಳು ಇವುಗಳನ್ನ ಹಿಡಿದು ಕೊಳ್ಳುವಣ ವ ಇವುಗಳಿಗಾಗಿ ಝಡತಿ ಮಾಡುವಣ ಮತ್ತು ಸದರೀ ಪದಾರ್ಥಗಳು ಸ್ವಾಧೀನದಲ್ಲಿಟ್ಟುಕೊಂಡಿರತಕ್ಕ ಮನುಷ್ಯರುಗಳನ್ನ ದಸ್ತಗಿರೀಮಾಡುವಣ ಇಂಥಾ ವಿಷಯಗಳನ್ನು ಕುರಿತು, ಸದರೀ ಮೇಲ್ಕಂಡ ಆಕ್ಟಿನಿಂದ ಯಕ್ಸೈಜ್ ಯಾನೆ ಅಬ್ಕಾರಿ ಆಫೀಸರಗಳಿಗೆ ಉಂಟುಮಾಡಲ್ಪಟ್ಟ ಯಲ್ಲಾ ಅಧಿಕಾರಗಳೂ, ದಫೇದಾರ ವ ಅದಕ್ಕೆ ಮೇಲ್ಪಟ್ಟ ದರ್ಜೆವುಳ್ಳ ತಮಾಂ ಪೋಲೀಸು ಆಫೀಸರಗಳಿಗೂ, ಶೇಕದಾರ್ ವ ಅದಕ್ಕೆ ಮೇಲ್ಪಟ್ಟ ದರ್ಜೆಯ ತಮಾಂ ರೆವಿನ್ಯೂ ಆಫೀಸರ್‌ಗಳಿಗೂ ಇದರ ದೆಶೆಯಿಂದ ಕೊಡುತ್ತಾರೆ.

ತಾರೀಖು 9ನೇ ಜಾಲೈ 1884.

ನಂ. 69—1870ನೇ ಇಸವಿ Xನೇ ಆಕ್ಟಿನ 6ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಇದರಿಂದ ಪ್ರಕಟಿಸುವದೇನಂದರೆ, ಇದರಡಿ ಕಂಡಸರ್ವೆ ನಂಬರುಗಳು ಸರ್ಕಾರ್ ಕೆಲಸಕ್ಕಾಗಿ ಅಂದರೆ ಬೆಂಗಳೂರು ಷಹರಿನಲ್ಲಿ ಹೊಸದಾಗಿ ಒಂದು ಆಸ್ಪತ್ರಿ ಕಟ್ಟುವ ಜಾಗ್ಯೆ ಬೇಕಾಗಿರುತ್ತೆ. ಸದರೀ ಜಮೀನಿನ ನಕ್ಷೆಯು, ಡಿಸ್ಟ್ರಿಕ್ಟು ಆಫೀಸು ಕಟ್ಟದಲ್ಲಿರತಕ್ಕ ಟವರ್ನ ಮ್ಯುನಿಸಿಪೆಲ್ ಕಮ್ಮಿಷನ್ ಆಫೀಸಿನಲ್ಲಿ ನೋಡಬಹುದು.

ಡಿಸ್ಟ್ರಿಕ್ಟು	ತಾಲ್ಲೂಕು.	ಗ್ರಾಮ.	ಪಟ್ಟೇದಾರ ಯಾ ಸ್ವಂತಗಾರರ ಹೆಸರು.	ನಂಬರು.	ವಿವರಣೆ.	ಬೀಜವರಿ.		ಕಂದಾಯ.			ಷರಾ.
						ಎ.	ಗುಂ.	ರೂ.	ಆ.	ಪೈ.	
ಬೆಂಗಳೂರು	ಡಿಟೋ	ಡಿಟೋ	ವೆಂಕಟಸಾಮಿನಾಯಿಕ ..	104	ಕಂದಾಯದ ಜಮೀನು	0	22	0	12	0	ಸರಕಾರಿ
			ಸಾವಂದಶೆಟ್ಟಿ ಸಿದ್ದಲಿಂಗಪ್ಪ ..	0	ಡಿಟೋ	0	19	0	12	0	ಡಿಟೋ
			ದಾನಪ್ಪನ ಸುಬ್ಬಣ್ಣ ..	0	ಡಿಟೋ	1	11	1	12	0	ಡಿಟೋ
			ಗುರಕಾರ ವೆಂಕಟರಮಣನಾಯಿಕ .	0	ಡಿಟೋ	3	8	4	4	0	ಡಿಟೋ
			ಪಟ್ಟೇದಾರಸುಬ್ಬಯ್ಯ, ಹಕ್ಕುದಾರ ವೆಂಕಟಸುಬ್ಬಯ್ಯ	105	ಡಿಟೋ	4	5	5	0	0	ಇನಾಂ
			ಮುನಷೀನಾಗಪ್ಪನವರ ಮಗ ಶೇಷಗಿರಿರಾವ್	106 ವ	ಡಿಟೋ	8	19	11	0	0	ಡಿಟೋ
				152		0	26	0	12	0	ಸರಕಾರಿ

ತಾರೀಖು 10ನೇ ಜುಲೈ 1884.

ನಂ. 70.—ಚಿತ್ರದುರ್ಗ ಸಬ್ ಡಿವಿಜನ್‌ಗೆ ಶೇರಿದ ಹೊಸದುರ್ಗದ ಡೆಪ್ಯುಟಿ ಅಮಲ್ದಾರ್ ಕಂಠೀರವಾಚಾರು, 1884ನೇ ಇಸವಿ ಜೂನ್ 2ನೇ ಮಾರ್ಕ್ಕಂ ಪೂರ್ವಾಹ್ನದಲ್ಲಿ ಮರಳಿ ಉದ್ಯೋಗದ ಮೇಲೆ ಹಾಜರಾದ್ದರಿಂದ 1884ನೇ ಇಸವಿ ಏಪ್ರೆಲ್ 22ನೇ ಮಾರ್ಕ್ಕಂ 11ನೇ ನಂಬರ್ ವುಳ್ಳ ಈ ಆಫೀಸ್ ಇಸ್ತಿಹಾರ್‌ನಾಮೆಯಿಂದ ಅವರಿಗೆ ಕೊಡಲ್ಪಟ್ಟ ಪ್ರಿವಿಲೀಜ್ ರಜಾ ಪೈಕೀ ಉಳಿದ ಭಾಗವು ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 11ನೇ ಜುಲೈ 1884.

ನಂ. 71.—ಹಾಸನದ ಫಾರೆಸ್ಟು ಸಬ್ ಅಸಿಸ್ಟೆಂಟ್ ಕನ್ಸರವೇಟರ್ ಮ|| ಜೆ. ಸ್ಟೀವರ್ನ್ಸಯವರು, 1884ನೇ ಇಸವಿ ಮೇ 9ನೇ ಮರ್ಕುಂ 23ನೇ ನಂಬರ್‌ವುಳ್ಳ ಈ ಆಫಿಸ್ ಇಸ್ತಿಹಾರ್‌ನಾಮೆಯಿಂದ ಅವರಿಗೆ ಕೊಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ ಆರು ವಾರಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ತಾರೀಖು 12ನೇ ಜುಲೈ 1884.

ನಂ. 72.—ಅಮೃತಮಹಲ್ ಇಲಾಖೇಗೆ ಸೇರಿದ ಅಮಲ್‌ದಾರ್ ಬಿ. ಗೋಪಾಲಯ್ಯಂಗಾರ್ರಿಗೆ ಸನ್ 1884ನೇ ಇಸವಿ ಮಾರ್ಚೀ 13ನೇ ಮರ್ಕುಂ 336ನೇ ನಂಬರ್‌ವುಳ್ಳ ಈ ಆಫೀಸ್ ಇಸ್ತಿಹಾರ್ ನಾಮೆಯಲ್ಲಿ ಕೊಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ ಒಂದು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 73,—ಯಡೆಹಳ್ಳಿ ಡೆಪ್ಯುಟೀ ಅಮಲ್‌ದಾರ್ ಮಹಮ್ಮದ್ ಅಲ್ಲೀಖಾನ್ರಿಗೆ, 1884ನೇ ಇಸವಿ ಫಿಬ್ರವರೀ 22ನೇ ಮರ್ಕುಂ 323ನೇ ನಂಬರ್‌ವುಳ್ಳ ಈ ಆಫೀಸ್ ಇಸ್ತಿಹಾರ್ ನಾಮೆಯಲ್ಲಿ ಕೊಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ ನಾಲ್ಕು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 74.—ಕೋಲಾರ ಡಿಸ್ಟ್ರಿಕ್ಟು ಶಿಡ್ಲಘಟ್ಟದ ತಾಲ್ಲೂಕು ಅಮಲ್‌ದಾರ್ ವೀರಾಸಾಮಿ ಮೊದಲಿಯಾರ್ರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ತಾಲ್ಲೂಕು ಶಿರಸ್ತೇದಾರ್ ವೆಂಕಟಾದ್ರಿ ನಾಯಕರಿಗೆ, ಅಮಲ್‌ದಾರ್ ವೀರಾಸಾಮಿ ಮೊದಲಿಯಾರ್ರ ಗೈರ್ ಹಾಜರಿಯಲ್ಲಿ, ಶಿಡ್ಲಘಟ್ಟದ ತಾಲ್ಲೂಕು 5ನೇ ಗ್ರೇಡ್ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಕೆಲಸನೋಡುವಂತೆ ಮೊಕರರ್.

ನಂ. 75.—ಮೈಸೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟು ವ ಸೆಷನ್ಸ್ ಜಡ್ಜೀಯರಾದ ಮ|| ವಿ. ಎನ್. ನರಸಿಹ್ಮಯ್ಯಂಗಾರ್ರು, 1884ನೇ ಇಸವಿ ಜುಲೈ 5ನೇ ಮರ್ಕು ಮಿನ ಪೂರ್ವಾನ್ಹದಲ್ಲಿ ವುದ್ಯೋಗದ ಮೇಲೆ ಮರಳಿ ಹಾಜರಾಗಿರುವದರಿಂದ 1884ನೇ ಇಸವಿ ಜೂನ್ 20ನೇ ಮರ್ಕುಂ 60ನೇ ನಂಬರ್‌ವುಳ್ಳ ಈ ಆಫೀಸ್ ಇಸ್ತಿಹಾರ್ ನಾಮೆಯಿಂದ ಅವರಿಗೆ ಕೊಡಲ್ಪಟ್ಟ ಪ್ರಿವಿಲೀಜ್ ರಜಾ ಪೈಕಿ ಉಳಿದ ಭಾಗವು ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 12ನೇ ಜುಲೈ 1884.

ನಂ. 77.—ಮೈಸೂರು ಮುನ್ಸಿಫ್ ಸಿ. ಶ್ರೀನಿವಾಸಯ್ಯಂಗಾರ್ರಿಗೆ, ಅವರು ಉಪಯೋಗಿಸಿ ಕೊಂಡ ತಾರೀಖು ಲಾಗಾಯತು ನೀಂತಲಬಿನ ಮೇಲೆ ಐದು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 78.—ಶಿವಮೊಗ್ಗಾ ಡಿಸ್ಟ್ರಿಕ್ಟು ತೀರ್ಥಹಳ್ಳಿ, ತಾಲ್ಲೂಕು ಅಮಲ್‌ದಾರ್ ತಿರುಮಲಾಚಾರ್ರು, 1884ನೇ ಇಸವಿ ಜುಲೈ 1ನೇ ಮರ್ಕು ಮಿನ ಪೂರ್ವಾನ್ಹದಲ್ಲಿ ಉದ್ಯೋಗದ ಮೇಲೆ ಮರಳಿ ಹಾಜರಾಗಿರುವದರಿಂದ, 1884ನೇ ಇಸವಿ ಜೂನ್ 26ನೇ ಮರ್ಕುಂ 61ನೇ ನಂಬರ್‌ವುಳ್ಳ ಈ ಆಫೀಸ್ ಇಸ್ತಿಹಾರ ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟಿದ್ದ ಪ್ರಿವಿಲೀಜ್ ರಜಾ ಪೈಕಿ ಉಳಿದ ಭಾಗವು ರದ್ದು ಮಾಡಲ್ಪಟ್ಟಿರುತ್ತೆ

ತಾರೀಖು 17ನೇ ಜುಲೈ 1884.

ನಂ. 80.—ಇದರಿಂದ ಪ್ರಕಟಪಡಿಸುವದೇನಂದರೆ, ಬೆಂಗಳೂರು ಡಿಸ್ಟ್ರಿಕ್ಟು ಕಾನಖಾನಹಳ್ಳಿ ತಾಲ್ಲೂಕಿನಲ್ಲಿ ಅಂದರೆ (ಬಸವನಪೆಟ್ಟ ಮತ್ತು ಚಿಲ್ಲಂದಾಡಿ ದೇಖೀಲ್) ಕಾವೇರಿ ಜಂಗ್ಲೀಗಳಲ್ಲಿ ಸ್ಲೀಪರಗಳಿಗೋಸ್ಕರ ಕಡಿಯಲ್ಪಟ್ಟ ಸುಮಾರು 20615 ಘನ ಅಡಿಗಳುಳ್ಳ ಕಾಡು ಜಾತಿ ನಾಟುಗಳು ಮತ್ತು ಮರಗಳು, ಕಾನಖಾನಹಳ್ಳಿ ತಾಲ್ಲೂಕು ಬೂವಳ್ಳಿ ಗ್ರಾಮದಲ್ಲಿ 1884ನೇ ಇಸವಿ ಸೆಪ್ಟಂಬರ 10ನೇ ಮರ್ಕು ಮಿನೊಳು ಫಾರೆಸ್ಟು ಸಬ್ ಅಸಿಸ್ಟೆಂಟ್ ಕನ್ಸರ್ವೇಟರಿಂದ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತವೆ.

2. ಹರಾಜ್ ಷರತಗಳು—ಮೈಸೂರು ಗೆಜೆಟ್ 1873ನೇ ಇಸವಿ ಜೂನ್ 12ನೇ ಮರ್ಕುಂ 20ನೇ ನಂಬರ ಇಸ್ತಿಹಾರ್ ನಾಮೆಯಲ್ಲಿ ಫಾಯಿಷ್ ಮಾಡಲ್ಪಟ್ಟ ಪ್ರಕಾರ ಇದ್ದು ಹರಾಜ್ ಕಾಲದಲ್ಲಿ ಓದಲ್ಪಡುವದು.

3. ಹರಾಜ್ ವಿಷಯಕವಾದ ಇತರ ಜಾಸ್ತೀ ತಪಸೀಲ್‌ಗಳನ್ನು ಡಿಸ್ಟ್ರಿಕ್ಟಿನ ಫಾರೆಸ್ಟು ಇಲಾಖೇಯಿಂದ ತಿಳಿದುಕೊಳ್ಳಬಹುದು.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾಹ್ನಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು; ಈ ಬಗ್ಯೆ ಹಿಂದಿನ ದಿನ ಸೆಕ್ರೆಟೇರಿಯವರಿಗೆ ತಮ್ಮ ಕಾರ್ಡುಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾಹ್ನಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಮೋಜೇಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಸೆಕ್ರೆಟೇರಿ.

ತಾರೀಖು 11ನೇ ಜುಲೈ 1884.

ನಂ. 76.—ಮೈಸೂರು ದೇಶದ ಲ್ಯಾಂಡ್ ರೆವಿನ್ಯೂ ಯಾನೇ ಜಮೀನು ಕಂದಾಯ ಸಂಬಂಧವಾದ ರೆಗ್ಯುಲೇಷನ್ನು ಈಗ ವಂದ ಸೆಲೆಕ್ಟ್ ಕಮ್ಮಿಟಿಯವರಿಂದ ಚರ್ಚಿಸಲ್ಪಡುತ್ತಲಿದೆಯಾಗಿ ಸದರೀ ಕಮ್ಮಿಟಿಯವರಿಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಇಚ್ಛೆಯುಳ್ಳ ಬಂದೋಬಸ್ತು ಇನಾಂದಾರರೂ, ಜೋಡೀದಾರರೂ, ವ ಕಾಯುಂಗುತ್ತಾದಾರರೂ ಮಾಹೆ ಮಜಕೂರು 21ನೇ ಮುರ್ಕುಂ ಸೋಮವಾರ ಮಧ್ಯಾಹ್ನ 12 ಘಂಟೆಗೆ ಬೆಂಗಳೂರಲ್ಲಿರತಕ್ಕ ಗವರ್ನಮೆಂಟ್ ಪಬ್ಲಿಕ್ ಆಫೀಸಿಗೆ ಹಾಜರಾಗಲಪೇಕ್ಷಿಸಲ್ಪಟ್ಟಿರುತ್ತಾರೆ.

ಪಿ. ಕೃಷ್ಣರಾವ್,
ಶ್ರೀಮನ್ ಮಹಾರಾಜರವರ ಕೌನ್ಸಿಲ್ ಮತ್ತು
ಸೆಲೆಕ್ಟ್ ಕಮ್ಮಿಟಿಯ ಮೆಂಬರ್.